ಆರ್ತನಾದ ಮಾಡತೊಡಗಿತು. ಆದರೆ ಅದನ್ನು ರಕ್ಷಿಸಲು ನವಿಲುಗಳಾಗಲೀ, ಪ್ರಾಣಿ, ಪಕ್ಷಿಗಳಾಗಲೀ ಮುಂದೆ ಬರಲಿಲ್ಲ. ಇನ್ನು ತನ್ನ ಕತೆ ಮುಗಿಯಿತೆಂದೇ ನವಿಲು ಭಾವಿಸಿತು.

ನವಿಲಿನ ಕರುಣಾಜನಕ ಪರಿಸ್ಥಿತಿ ಅದರ ಸ್ನೇಹಿತನಾಗಿದ್ದ ಕೋತಿಗೆ ತಿಳಿಯಿತು. ತನ್ನನ್ನು ಕಂಡರೆ ನವಿಲಿಗೆ ಎಷ್ಟೇ ತಿರಸ್ಕಾರವಿದ್ದರೂ, ಕೋತಿಗೆ ಅದರ ಮೇಲೆ ಕರುಣೆ ಉಕ್ಕಿತು. ಹೇಗಾದರೂ ಮಾಡಿ ನವಿಲನ್ನು ಈ ಸಂಕಷ್ಟದಿಂದ ಪಾರು ಮಾಡಬೇಕು ಅಂತ ನಿರ್ಧರಿಸಿತು. ಕೂಡಲೇ ಕಾಡಿನ ಇತರ ಕೋತಿಗಳನ್ನೆಲ್ಲಾ ಸಂಪರ್ಕಿಸಿ, ನವಿಲನ್ನು ಬೇಟೆಗಾರನಿಂದ ಕಾಪಾಡಲು ತನಗೆ ಸಹಾಯ ಮಾಡುವಂತೆ ಕೇಳಿಕೊಂಡಿತು. ಒಳ್ಳೆಯ ಕೆಲಸವೊಂದನ್ನು ಮಾಡಲು ವಾನರ ಮಿತ್ರರೆಲ್ಲ ತಕ್ಷಣ ಒಪ್ಪಿಕೊಂಡವು. ನೂರಾರು ಕೋತಿಗಳು ಮರದಿಂದ ಮರಕ್ಕೆ ಜಿಗಿಯುತ್ತಾ ಬಹಳ ಬೇಗ ಬೇಟೆಗಾರನ ಗಾಡಿಯ ಬಳಿ ಬಂದವು. ನೋಡುನೋಡುತ್ತಿದ್ದಂತೆ ಅಷ್ಟೂ ಕೋತಿಗಳು ಬೇಟೆಗಾರನ ಮೇಲೆ ಮುಗಿಬಿದ್ದವು. ಕೋತಿಗಳ ಏಕಾಏಕಿ ದಾಳಿಯಿಂದ ಬೇಟೆಗಾರ ದಿಗ್ಭ್ರಾಂತನಾಗಿ, ಜೀವ ಭಯದಿಂದ ಗಾಡಿಯನ್ನೂ, ನವಿಲನ್ನೂ ಅಲ್ಲೇ ಬಿಟ್ಟು ಪರಾರಿಯಾದ. ಕೋತಿಗಳೆಲ್ಲಾ ಸಂತೋಷದಿಂದ ಕೇಕೆ ಹಾಕುತ್ತಾ ನವಿಲನ್ನು ಹಗ್ಗದಿಂದ ಬಿಡಿಸಿ ಅಲ್ಲಿಂದ ಹೊರಟು ಹೋದವು. ನವಿಲಿಗೆ ಹೋದ ಜೀವ ಬಂದಂತಾಯಿತು. ತನ್ನ ಜೀವ ಉಳಿಸಿದ್ದು ತನ್ನ ಮಿತ್ರ ಕೋತಿಯೇ ಎಂದು ಅರ್ಥ ಮಾಡಿಕೊಳ್ಳಲು ನವಿಲಿಗೆ ಹೆಚ್ಚು ಹೊತ್ತು ಬೇಕಾಗಲಿಲ್ಲ.

ತಾನು ಎಷ್ಟೇ ಅವಮಾನಿಸಿದರೂ ಅದ್ಯಾವುದನ್ನೂ ಮನಸ್ಸಿನಲ್ಲಿಟ್ಟುಕೊಳ್ಳದೇ ತನ್ನನ್ನು ಕಾಪಾಡಿದ ಕೋತಿಯ ಬಗ್ಗೆ ನವಿಲಿಗೆ ಕೃತಜ್ಞತೆ ಮೂಡಿತು. ತಾನು ನೋಡಲು ಎಷ್ಟೇ ಸುಂದರನಾದರೂ, ತನ್ನ ಮನಸ್ಸು ಕುರೂಪಿಯೇ. ಕೋತಿಯು ನೋಡಲು ಕುರೂಪಿಯಾದರೂ, ಚಿನ್ನದಂತಹ ಮನಸ್ಸಿರುವ ಅದು ತನಗಿಂತ ಸುಂದರ ಎಂಬ ಸತ್ಯ ಅದಕ್ಕೆ ಅರ್ಥವಾಯಿತು.

ಕೂಡಲೆ ಕೋತಿಯ ಬಳಿ ಹೋಗಿ ಪರಿಪರಿಯಾಗಿ ಕ್ಷಮಾಪಣೆ ಯಾಚಿಸಿತು. ಕೋತಿ 'ಸ್ನೇಹದಲ್ಲಿ ಪಶ್ಚಾತ್ತಾಪ ಹಾಗೂ ಕ್ಷಮಾಪಣೆಗೆ ಸ್ಥಾನವಿಲ್ಲ. ನನಗೆ ಮತ್ತೆ ನಿನ್ನ ಸ್ನೇಹ ದೊರಕಿದ್ದೇ ನನ್ನ ಅದೃಷ್ಟ. ಇನ್ನು ಮೇಲೆ ಯಾರು ಏನೇ ಹೇಳಿದರೂ, ನಾವಿಬ್ಬರೂ ಒಳ್ಳೇ ಸ್ನೇಹಿತರಾಗಿರೋಣ' ಅಂತ ಹೇಳಿತು. ಅವರಿಬ್ಬರ ಸ್ನೇಹದಲ್ಲಿ ಹುಳಿ ಹಿಂಡುವ ಪ್ರಯತ್ನ ಮಾಡಿದ ಪಕ್ಷಿಗಳೂ, ಇತರ ಪ್ರಾಣಿಗಳೂ ಅವರಿಬ್ಬರ ಸ್ನೇಹದಿಂದ 'ದೇಹದ ಸೌಂದರ್ಯಕ್ಕಿಂತಲೂ ಒಳ್ಳೆಯ ಮನಸ್ಸೇ ಸುಂದರ' ಎಂಬ ಪಾಠ ಕಲಿತವು.

## ಕುಂಚ ಪ್ರಪಂಚ



**ಲೌಖ್ಯಾ ಹೆಗಡೆ**
4ನೇ ತರಗತಿ, ಲಯನ್ಸ್ ಇಂಗ್ಲಿಷ್ ಮೀಡಿಯಂ ಸ್ಕೂಲ್, ಶಿರಸಿ

# ಶಬ್ದಗಳ ಕರಾಮತ್ತು

**ಜೆ.ಎಸ್. ಗಾಂಜೇಕರ**
ಕಲೆ: ಸಂತೋಷ್ ಸಸಿಹಿತ್ಲು

ಹಕ್ಕಿ
ಭತ್ತ ಹೆಕ್ಕಿ
ಹಾರಿತು ಗಗನಕೆ

ಬೆಕ್ಕು
ಹಾಲು ನೆಕ್ಕಿ
ಸರಿಯಿತು ಪಕ್ಕಕೆ

ಇದ ನೋಡಿದ
ಕಂದ
ಅಮ್ಮನ ಕರೆದ

ಯಾಕೆ ಅಮ್ಮ
ಹಕ್ಕಿ ಹೆಕ್ಕಿತು
ಬೆಕ್ಕು ನೆಕ್ಕಿತು?

ಯಾಕೆಂದರೆ
ಅವಕ್ಕೆ ಹಸಿವಾಯಿತು

